**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆಃ 148/2022**

ಚಾಸಾಃ1 ಪ್ರಾಸಾಃ1

| | | |
|---|---|---|
| ಹೆಸರು | : | ಶಿವರಾಜು |
| ಗಂಡನ/ತಂದೆಯ ಹೆಸರು | : | ಮೋಟಯ್ಯ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಕೆಲಗೆರೆ ಗ್ರಾಮ |

**ದಿನಾಂಕ 06.01.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ಚಾಸಾ2 ಮತ್ತು ಚಾಸಾ3 ರವರುಗಳು ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಸಂಬಂದಿ. ದಿಃ01.09.2021 ರಂದು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ನಮ್ಮ ಗ್ರಾಮದಲ್ಲಿರುವ ನಮ್ಮ ಜಮೀನಿನ ಹತ್ತಿರ ನಾನು ತೆವರಿ ಕಟ್ಟುತ್ತಿದ್ದಾಗ ಆರೋಪಿಯು ತನ್ನ ಜಮೀನಿನಲ್ಲಿರುವಾಗ ನಾನು ತೆವರಿಯನ್ನು ಕಟ್ಟುತ್ತಿರುವುದನ್ನು ನೋಡಿ ಬಂದು ಏಕೆ ನಮ್ಮ ಜಮೀನಿನಿಂದ ಮಣ್ಣನ್ನು ತೆಗೆದು ತೆವರಿಯನ್ನು ಕಟ್ಟುತ್ತೀದ್ದಿಯಾ ಎಂದು ನನ್ನ ಜೊತೆ ಜಗಳ ತೆಗೆದು, ಕೆಟ್ಟ ಶಬ್ದದಿಂದ ಅಂದರೆ ಸೂಳೆ ಮಗನೇ, ಬೋಳಿಮಗನೆ ಎಂದು ಬೈದು, ಆರೋಪಿಯ ಕೈಯಲ್ಲಿದ್ದ ಕುಡ್ಲು ವಿನಿಂದ ನನ್ನ ತಲೆಗೆ ಹೊಡೆದಿರುತ್ತಾನೆ. ಅದರಿಂದ ನನಗೆ ರಕ್ತ ಗಾಯ ಉಂಟಾಗಿರುತ್ತದೆ ರಕ್ತ ಬಟ್ಟೆಗೆ ತಾಗಿರುತ್ತದೆ. ಆಗ ಚಾಸಾ2 ಮತ್ತು 3 ರವರು ಜಗಳವನ್ನು ಬಿಡಿಸಿ ನನ್ನನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ದಿಃ02.09.2021 ರಂದು ಠಾಣೆಗೆ ಹಾಜರಾಗಿ ದೂರು ನೀಡಿರುತ್ತೇನೆ. ದೂರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನಗೆ ನೋವು ಜಾಸ್ತಿಯಾಗಿದ್ದ ಕಾರಣ ತಡವಾಗಿ ದೂರನ್ನು ನೀಡಿರುತ್ತೇನೆ.

ಅದೇ ದಿನ ಪೋಲಿಸರು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ನಮ್ಮ ಗ್ರಾಮಕ್ಕೆ ಬಂದು ಘಟನೆ ನಡೆದ ಸ್ಥಳದಲ್ಲಿ ಮಧ್ಯಾಹ್ನ 1.00 -3.00

ಗಂಟೆಯವರೆಗೆ ಚಾಸಾ3 ಮತ್ತು ನಿಂಗಯ್ಯರವರ ಸಮಕ್ಷಮ ಸ್ಥಳ ಮಹಜರ್ ಅನ್ನು ಜರುಗಿಸಿ, ಅದೇ ಸಮಯದಲ್ಲಿ ಬಿಸ್ಕತ್ ಕಲರ್ ಶರ್ಟ್ ಮತ್ತು ಕುಡುಗೋಲನ್ನು ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಮಹಜರ್ ಅನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶರ್ಟ್ ಮತ್ತು ಕುಡುಗೋಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು. 10 ದಿನಗಳ ನಂತರ ಪೋಲಿಸರು ನನ್ನ ಮರುಹೇಳಿಕೆಯನ್ನು ಪಡೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನನಗೆ ಹಲ್ಲೆ ಮಾಡಿರುತ್ತಾನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ, ಅನುಮತಿಸಲಾಯಿತು).**

**ಪಾಟೀ ಸವಾಲುಃ ಎಪಿಪಿಯವರಿಂದಃ**

ನಿಪಿ-2 ರ ಮಹಜರ್ ಅನ್ನು ಮಾಡಿಸಿದಾಗ ಚಾಸಾ2 ರವರು ಸಹ ಹಾಜರಿದ್ದರು ಎಂದರೆ ನಿಜ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಎಸ್ ಹೆಚ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ದೂರನ್ನು ಪೋಲಿಸರು ಬರೆದುಕೊಂಡಿರುತ್ತಾರೆ. ದೂರಿನಲ್ಲಿರುವ ಅಂಶಗಳು ಗೊತ್ತಿದೆ. ಚಾಸಾ2 ಮತ್ತು 3 ರವರು ಸ್ಥಳದಲ್ಲಿದ್ದ ಬಗ್ಗೆ ದೂರಿನಲ್ಲಿ ತಿಳಿಸಿರುತ್ತೇನೆ. ಆಸ್ಪತ್ರೆಯಲ್ಲಿ ಆ ದಿನ ರಾತ್ರಿ ಇದ್ದೆ. ನಂತರ ಬಂದಿರುತ್ತೇನೆ. ಆಸ್ಪತ್ರೆಯಲ್ಲಿ ಪೋಲಿಸರು ಬಂದು ಹೇಳಿಕೆಯನ್ನು ಪಡೆದಿಲ್ಲ. ಶರ್ಟ್ ನನ್ನ ಮೈ ಮೇಲೆ ಇತ್ತು. ಕುಡ್ಲು ಸ್ಥಳದಲ್ಲಿ ಇತ್ತು. ಮಹಜರ್ ಸಮಯದಲ್ಲಿ ಪೋಲಿಸರು ಭಾವಚಿತ್ರವನ್ನು ತೆಗೆದಿಲ್ಲ. ಮು ಮಾ 1 ಮತ್ತು 2 ರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿಲ್ಲ. ಸಾಮಾನ್ಯವಾಗಿ ಕುಡ್ಲು ಎಲ್ಲರ ಮನೆಯಲ್ಲಿ ಸಿಗುತ್ತವೆ ಎಂದರೆ ನಿಜ. ಮಹಜರ್ ಕಾಲದಲ್ಲಿ ನನ್ನ ಶರ್ಟ್ ಅನ್ನು ಬಿಚ್ಚಿಕೊಟ್ಟಿರುತ್ತೇನೆ. ಈ ಬಗ್ಗೆ ಮಹಜರ್ ನಲ್ಲಿ ಬರೆದಿಲ್ಲ. ಚಾಸಾ-2 ಮತ್ತು 3 ರವರು ಅಕ್ಕ ಪಕ್ಕದ ಜಮೀನಿನವರು. ಅವರೇ ಸ್ವತಃ ಬಂದಿದ್ದರು. ಚಾಸಾ2 ಮತ್ತು 3 ರವರು ಠಾಣೆಯಲ್ಲಿಯೂ ಸಹ ಸಹಿ ಮಾಡಿರುತ್ತಾರೆ ಸಾಕ್ಷಿ ಮುಂದುವರೆದು ಮಹಜರಿಗೆ ಸ್ಥಳದಲ್ಲಿ ಸಹಿ ಮಾಡಿರುತ್ತಾರೆ. ಆರೋಪಿ ನನ್ನ ಅಣ್ಣನ ಮಗ.

ಆರೋಪಿಗೂ ಮತ್ತು ನನಗೂ ಜಮೀನಿನ ವಿಚಾರವಾಗಿ ತಗಾದೆ ಇದೆ ಎಂದರೆ ನಿಜ. ಈ ಜಮೀನಿನ ತೆವರಿಯಲ್ಲಿ ಕಲ್ಲುಗಳು ಇವೆ ಎಂದರೆ ನಿಜ. ವ್ಯವಸಾಯ ಮಾಡುವಾಗ ನಾನೇ ಕಾಲು ಜಾರಿ ಬಿದ್ದು, ಗಾಯ ಮಾಡಿಕೊಂಡು ಆರೋಪಿ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸುಳ್ಳು. ಆರೋಪಿ ನನಗೆ ಬೈದಿಲ್ಲ, ಹಲ್ಲೆ ಮಾಡಿಲ್ಲ ಮತ್ತು ಬೆದರಿಕೆ ಹಾಕಿಲ್ಲ  ಎಂದರೆ ಸುಳ್ಳು. ನಾನು ಪೋಲಿಸರಿಗೆ ಮರು ಹೇಳಿಕೆ ನೀಡಿಲ್ಲ ಎಂದರೆ ಸುಳ್ಳು.ನಾನು ಮತ್ತು ಚಾಸಾ2 ಮತ್ತು 3 ರವರು ಸೇರಿಕೊಂಡು ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸುಳ್ಳು. ಮುದ್ದೆ ಮಾಲುಗಳನ್ನು ನಾನೇ ಸೃಷ್ಟಿ ಮಾಡಿರುತ್ತೇನೆಂದರೆ ಸುಳ್ಳು.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ  ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**